ಹೋಗಿಬಿಡುತ್ತಾರೆ. ಇದರಿಂದಾಗಿ ಬಹಳ ತೊಂದರೆಯಾಗಿದೆ. ಅದು ನಮಗೂ ಗೊತ್ತಿದೆ. ಅದೂ ಕೂಡ ನಮ್ಮ ಇಲಾಖೆಯ ವ್ಯಾಪ್ತಿಯಲ್ಲೂ ಬರುವುದರಿಂದ ಪರಿಸರ ಇಲಾಖೆಯ ಸೂಚನೆಯನ್ನು ಪಾಲಿಸುವಂತೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಂತೆ ನಾನೂ ಕೂಡ ನಮ್ಮ ಇಲಾಖೆಯ ಅಧಿಕಾರಿಗಳಿಗೆ ತಿಳಿಸುತ್ತೇನೆ.

ವಿಷಯ: (ಅ) ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ವಿಶ್ರಾಂತಿ ವೇತನ ನೀಡುವ ಬಗ್ಗೆ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ(ಬಸವನಗುಡಿ): ಮಾನ್ಯ ಅಧ್ಯಕ್ಷರೇ, ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ವಿಶ್ರಾಂತಿ ವೇತನ ನೀಡುವ ಬಗ್ಗೆ ನಾನು ಇಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಈ ವಿಚಾರವಾಗಿ ನಿನ್ನೆ ತಾನೆ ಮುಷ್ಕರವೂ ಸಹ ನಡೆದಿದೆ. ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳಲ್ಲಿ ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆಲ್ಲಾ ವಿಶ್ರಾಂತಿ ವೇತನವನ್ನು ನೀಡುತ್ತಿದ್ದಾರೆ. ಕರ್ನಾಟಕದಲ್ಲೂ ಕೂಡ ಮೊದಲು ಕೊಡುತ್ತಿದ್ದರು. ಈಗ ಏಕೋ ಅದನ್ನು ನಿಲ್ಲಿಸಿದ್ದಾರೆ. 1955ರಲ್ಲಿ ನಡೆದಂತಹ ಸತ್ಯಾಗ್ರಹದಲ್ಲಿ ಭಾಗಿಯಾದಂತಹ ಅನೇಕರು ಈಗಲೂ ಇದ್ದಾರೆ. ಅವರೆಲ್ಲರೂ ಸಹಿತ ನಿನ್ನೆ ದಿವಸ ಗಾಂಧೀಜಿ ಪ್ರತಿಮೆ ಮುಂದೆ ತಮ್ಮ ಬೇಡಿಕೆಗೆ ಒತ್ತಾಯಿಸಿ ಧರಣಿ ನಡೆಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಲ್ಲೂ ಸಹಿತ ಅವರು ನೋಡಿ ತಮ್ಮ ಮನವಿ ಅರ್ಪಿಸಿದ್ದಾರೆ. ಇದರ ಬಗ್ಗೆ ಹೈಕೋರ್ಟ್‌ನಲ್ಲೂ ಸಹಿತ ತೀರ್ಮಾನವಾಗಿ ಅಂತಿಮವಾಗಿ ಈ ವಿಷಯ ಸರ್ಕಾರದ ಮಟ್ಟದಲ್ಲೇ ಪೆಂಡಿಂಗ್ ಇದೆ. ಯಾರ್ಯಾರು ನಿಜವಾಗಿಯೂ ಕೂಡ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೋ ಅವರಿಗೆಲ್ಲಾ ವಿಶ್ರಾಂತಿ ವೇತನ ಕೊಡಬೇಕಾದುದು ಅವಶ್ಯಕವಾಗಿದೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಬೇಗನೇ ಕ್ರಮ ಕೈಗೊಳ್ಳಬೇಕೆಂದು ನಾನು ಆಗ್ರಹಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಪೆನ್‌ಷನ್ ಅನ್ನು ಬಿಡುಗಡೆ ಮಾಡಿದ್ದರು. ಹಲವಾರು ವರ್ಷಗಳಿಂದ ನೀಡಲಾಗುತ್ತಿದ್ದ ಈ ಪೆನ್‌ಷನ್ ಅನ್ನು ಏಕಾಏಕಿಯಾಗಿ ಕಳೆದ ಕೆಲವು ವರ್ಷಗಳಿಂದ ನಿಲ್ಲಿಸಲಾಗಿದೆ. ಸತ್ಯಾಗ್ರಹದಲ್ಲಿ ಭಾಗವಹಿಸಿದವರಲ್ಲಿ ಹೆಚ್ಚಿನವರು ತಮ್ಮ ಜೀವನದ ಕೊನೆಯ ಹಂತದಲ್ಲಿದ್ದಾರೆ. ಸುಮಾರು 70-75 ವರ್ಷಗಳ ವಯಸ್ಸಿನವರು ನಮ್ಮ ಮನೆಗೆ ಬಂದು ನಮಗೆ ಸಿಗಬೇಕಾದಂತಹ ಪೆನ್‌ಷನ್ ನಮಗೆ ಸಿಗುತ್ತಿಲ್ಲ, ತಾವು ದಯವಿಟ್ಟು ಇದರ ಬಗ್ಗೆ ಪ್ರಯತ್ನ ಮಾಡಬೇಕೆಂದು ನಮ್ಮಲ್ಲಿ ಕೋರುತ್ತಾರೆ. ಇಂತಹ ಒಂದು ದುಸ್ಥಿತಿಗೆ ನಾವು ಅವರನ್ನು ತರಬಾರದು. ಈ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ತಕ್ಷಣ ಅವರಿಗೆ ವಿಶ್ರಾಂತಿ ವೇತನವನ್ನು ಬಿಡುಗಡೆ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೆಂಬ ವಿಶೇಷ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

+ಶ್ರೀ ಎ. ಕೃಷ್ಣಪ್ಪ(ಸಕ್ಕರೆ ಮತ್ತು ಪಶುಸಂಗೋಪನಾ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ, ದಿನಾಂಕ 1.1.91ರಿಂದ ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಗೌರವ ಧನ ಮಂಜೂರು ಮಾಡುವ ಗೋವಾ ಗೌರವ

ಧನ ಯೋಜನೆಯನ್ನು ಜಾರಿಗೆ ತರಲಾಯಿತು. ಯೋಜನೆಯ ಆರಂಭದಲ್ಲಿ ಸುಮಾರು 500 ಜನ ಸತ್ಯಾಗ್ರಹಿಗಳು ಇರಬಹುದು ಎಂದು ಅಂದಾಜು ಮಾಡಲಾಗಿತ್ತು. ಗೋವಾ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದ್ದ ಬಗ್ಗೆ ಯಾರು ಅಧಿಕೃತ ದಾಖಲೆಗಳನ್ನು ಒದಗಿಸಲು ವಿಫಲರಾಗಿದ್ದಲ್ಲಿ ಅಂತಹ ಪ್ರಮಾಣ ಪತ್ರಗಳನ್ನು ನೀಡಲು ಶ್ರೀ ಜಿ.ಎಲ್. ರಾಮರೆಡ್ಡಿಯವರನ್ನು ತಂಡದ ನಾಯಕನನ್ನಾಗಿ ನೇಮಿಸಲಾಗಿತ್ತು. ಶ್ರೀ ಜಿ.ಎಲ್. ರಾಮರೆಡ್ಡಿಯವರು ನೀಡಿದ ಪ್ರಮಾಣ ಪತ್ರಗಳ ಆಧಾರದ ಮೇಲೆ ಒಟ್ಟು 2,225 ಗೋವಾ ಸತ್ಯಾಗ್ರಹಿಗಳಿಗೆ ಗೋವಾ ಗೌರವ ಧನವನ್ನು ಮಂಜೂರು ಮಾಡಲಾಗಿತ್ತು. ತಂಡದ ನಾಯಕರಾದ ಜಿ.ಎಲ್. ರಾಮರೆಡ್ಡಿಯವರು ತನ್ನ ಸಹಿಯನ್ನು ಫೋರ್ಜರಿ ಮಾಡಲಾಗಿದೆ ಎಂದು ಸರ್ಕಾರಕ್ಕೆ ಪತ್ರ ಬರೆದ ಪ್ರಯುಕ್ತ ಈ ಪ್ರಕರಣ ಪುನರ್ ಪರಿಶೀಲಿಸಿ ದಿನಾಂಕ 2.4.94ರ ಸರ್ಕಾರಿ ಆದೇಶದಂತೆ 1943 ಸತ್ಯಾಗ್ರಹಿಗಳಿಗೆ ನೀಡುತ್ತಿದ್ದ ಗೌರವ ಧನವನ್ನು ರದ್ದುಪಡಿಸಲಾಯಿತು. 1943 ಸತ್ಯಾಗ್ರಹಿಗಳ ವೈಕಿ ಕೆಲವು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ ಹಿನ್ನೆಲೆಯಲ್ಲಿ ನ್ಯಾಯಾಲಯವು ರಿಟ್ ಅರ್ಜಿಯನ್ನು ಪರಿಶೀಲಿಸಿ ತಾರೀಖು 13.7.1994ರ ತನ್ನ ತೀರ್ಪಿನಲ್ಲಿ 2.4.94ರ ಆದೇಶವನ್ನು ರದ್ದು ಪಡಿಸಿ ಅರ್ಜಿದಾರರಿಗೆ ಅವಕಾಶ ನೀಡುವುದರೊಂದಿಗೆ ಅವರ ಅಹವಾಲುಗಳನ್ನು ಕೇಳಿ ಪುನರ್ ಪರಿಗಣಿಸಬೇಕೆಂದು ನಿರ್ದೇಶಿಸಿದ ಮೇರೆಗೆ ಎಲ್ಲಾ ಅರ್ಜಿದಾರರಿಗೆ ನೋಟೀಸ್ ಜಾರಿ ಮಾಡಿ ವಿಚಾರಣೆ ನಡೆಸಲಾಯಿತು. ವಿಚಾರಣೆ ನಡೆಸಿ ಹೇಳಿಕೆ ಪಡೆದ ನಂತರ 1224 ಅರ್ಜಿದಾರರಿಗೆ ದಿನಾಂಕ 19.4.1995ರವರೆಗೆ ಅಂದರೆ ಯೋಜನೆಯನ್ನು ಹಿಂದಕ್ಕೆ ತೆಗೆದುಕೊಂಡ ದಿನದವರೆಗೆ ಗೌರವ ಧನ ಬಾಕಿ ಹಣವನ್ನು ಮಂಜೂರು ಮಾಡಲಾಗಿದೆ. ಉಳಿದ ಪ್ರಕರಣಗಳಲ್ಲಿ ವಿಚಾರಣಾ ಕ್ರಮ ಕೈಗೊಳ್ಳಲಾಗಿದೆ. ಗೋವಾ ಗೌರವ ಧನ ಮಂಜೂರಾತಿ ಪ್ರಕರಣದಲ್ಲಿ ಬಹುತೇಕ ಪ್ರಕರಣಗಳು ಖೋಟಾ (ಬೋಗಸ್) ಎಂದು ಸಚಿವರು, ಶಾಸಕರುಗಳು ಹಾಗೂ ಸಮಾಜದ ಗಣ್ಯ ವ್ಯಕ್ತಿಗಳು ದೂರನ್ನು ಸಲ್ಲಿಸಿದ ಕಾರಣ ಈ ವಿಷಯ ವಿಧಾನ ಮಂಡಲದ ಉಭಯ ಸದನಗಳಲ್ಲಿ ದೀರ್ಘವಾಗಿ ಚರ್ಚಿಸಿ ಗೋವಾ ವಿಮೋಚನಾ ಚಳುವಳಿಗಾರರಿಗೆ ನೀಡುತ್ತಿದ್ದ ಗೌರವ ಧನ ಮಂಜೂರು ಮಾಡುವುದನ್ನು ದಿನಾಂಕ 5.4.1993ರಿಂದ ನಿಲ್ಲಿಸಲಾಯಿತು. ಗೋವಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಯಾವುದೇ ಅಧಿಕೃತ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದರಿಂದ ಈ ಯೋಜನೆಯನ್ನು ಸಚಿವ ಸಂಪುಟದ ಅನುಮೋದನೆಯೊಂದಿಗೆ ದಿನಾಂಕ 19.4.95ರಿಂದ ಜಾರಿಗೆ ಬರುವಂತೆ ಹಿಂತೆಗೆದು ಕೊಳ್ಳಲಾಯಿತು. ಯೋಜನೆಯನ್ನು ಹಿಂತೆಗೆದುಕೊಂಡ ಸರ್ಕಾರದ ಈ ಆದೇಶದ ವಿರುದ್ಧ ಕೆಲವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದಾಗ ನ್ಯಾಯಾಲಯ ದಿನಾಂಕ 3.3.97ರ ತೀರ್ಪಿನಲ್ಲಿ ಯೋಜನೆಯನ್ನು ಹಿಂತೆಗೆದುಕೊಂಡ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದಿದೆ. ಈ ತೀರ್ಪಿನ ವಿರುದ್ಧ ಸಲ್ಲಿಸಿದ ಮೇಲ್ಮನವಿಯೂ ಸಹಾ ವಜಾ ಆಗಿರುತ್ತದೆ. ವಿಭಾಗೀಯ ಪೀಠದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಹಾ ವಿಶೇಷ ಅರ್ಜಿ ಸಲ್ಲಿಸಿದ್ದು, ಈ ವಿಶೇಷ ಅರ್ಜಿಯೂ ಸಹಾ ವಜಾ ಆಗಿರುತ್ತದೆ. ಇದರಿಂದಾಗಿ ಗೋವಾ ಗೌರವ ಧನ ಮಂಜೂರಾತಿ ಯೋಜನೆ ಪ್ರಸಕ್ತ ಚಾಲಿಯಲ್ಲಿ ಇರುವುದಿಲ್ಲ ಹಾಗೂ ಈ ಯೋಜನೆಯನ್ನು ಪುನರಾರಂಭಿಸುವ ಪ್ರಸ್ತಾವನೆ ಸಹಾ ಸರ್ಕಾರದ ಮುಂದಿರುವುದಿಲ್ಲ.

6.40 ಪಿ.ಎಂ

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಯಾರೋ ಕೆಲವರು ತಪ್ಪು ಮಾಡಿದ್ದರೆ ಎಲ್ಲರಿಗೂ ಇದು ಮಾಡಿರುವುದು ಬಹಳ ತಪ್ಪು. ಕೆಲವರು ಮಾತ್ರ ಇದನ್ನು ಥಾಲೆಂಚ್ ಮಾಡಿದ್ದರು. ನಿಜವಾಗಿ ಗೋವಾಗೆ ಹೋದವರು ಕೆಲವರಿದ್ದಾರೆ. ಯೋಗೀಶ್ ಭಟ್‌ರವರು ಹೇಳಿದ ಹಾಗೆ ಸೀನಿಯರ್ ಸಿಟಿಸನ್ಸ್ ಯಾರಿದ್ದಾರೆ ಅವರಿಗೆ ಸಹಾಯ ಮಾಡಬೇಕೆಂದು ಅವರೆಲ್ಲಾ ಮುಖ್ಯ ಮಂತ್ರಿಗಳಿಗೆ ಭೇಟಿ ಮಾಡಿದ್ದರು, ಅದನ್ನು ಪರಿಶೀಲನೆ ಮಾಡೋಣ ಎಂದು ಹೇಳಿದ್ದರು. ಸುಳ್ಳು ಪ್ರಮಾಣ ಪತ್ರ ಕೊಟ್ಟವರ ಮೇಲೆ ಕ್ರಮ ಜರುಗಿಸಿ. ಯಾರು ನಿಜವಾಗಿ ಗೋವಾ ಚಳುವಳಿಯಲ್ಲಿ ಭಾಗವಹಿಸಿದ್ದರು ಅವರಿಗೆ ಮಾಕಾನ ಕೊಡುವುದು ದಯವಿಟ್ಟು ಕೊಡಬೇಕಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಒಂದು ರೀತಿಯಲ್ಲಿ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಅಪಮಾನ ಮಾಡುತ್ತಿದ್ದೀರಿ. ನಿಜವಾದ ಹೋರಾಟಗಾರರು ಯಾರಿದ್ದಾರೆ ಅವರಿಗೆ ಗೌರವಧನವನ್ನು ಕೊಡದೆ ಇರುವುದು, ಯಾರು ತಪ್ಪು ಮಾಹಿತಿ ನೀಡಿದ್ದಾರೆ ಅದನ್ನು ಪರಿಶೀಲಿಸಿ ಅವರಿಗೆ ಬೇಕಾದರೆ ಗೌರವಧನವನ್ನು ಕೊಡುವುದು ನಿಲ್ಲಿಸಿ. ಆದರೆ ನಿಜವಾದ ಹೋರಾಟಗಾರರು ಯಾರಿದ್ದಾರೆ ಅವರಿಗೆ ಗೌರವಧನವನ್ನು ಕೊಡಬೇಕು. ಉದಾಹರಣೆಗೆ ಡಾ: ವಿ ಕೃಷ್ಣಯ್ಯ ಪಾಜಿ ಸಂಸದರು ಹಾಗೂ ವಿಧಾನ ಸಭಾ ಸದಸ್ಯರೂ ಆಗಿದ್ದರು. ಅಂತಹವರ ನೇತೃತ್ವದಲ್ಲಿ ಒಂದು ಟೀಮ್ ಕೂಡ ಇತ್ತು. ಸತ್ಯ ಶೋಧನೆ ಮಾಡಿ ಯಾರು ನಿಜವಾದ ಹೋರಾಟಗಾರರು ಎಂದು ಹೇಳುವ ಪ್ರಯತ್ನ ಕೂಡ ಸರ್ಕಾರದಲ್ಲಿ ಆಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಇದನ್ನು ಪುನರ್ ವಿಮರ್ಶೆ ಮಾಡಬೇಕು. ಅವರಿಗೆ ಅಗೌರವದಿಂದ ನೋಡಬಾರದು. ಎರಡನೆಯದಾಗಿ 75 ವರ್ಷ ದಾಟಿರುವಂತಹ ಮಹನೀಯರಿಗೆ ನಾವು ಖಂಡಿತವಾಗಿ ಗೌರವ ಕೊಡಬೇಕು. ಗೌರವ ಧನ ಕೊಟ್ಟು ಅವರ ಜೀವನದ ಕೊನೆಯ ದಿನಗಳಲ್ಲಿ ಗೌರವದಿಂದ ನೆಮ್ಮದಿಯಿಂದ ಇರುವಂತಹ ಪ್ರಯತ್ನ ನಾವು ಮಾಡಬೇಕಾಗಿದೆ. ದಯವಿಟ್ಟು ಸರ್ಕಾರ ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ: ಮಾನ್ಯ ಅಧ್ಯಕ್ಷರೆ, ಗೋವಾ ಚಳುವಳಿ ವಿಚಾರದಲ್ಲಿ ಬಹುತೇಕರಿಗೆ ಅಷ್ಟು ಪಂಯಸ್ಸಾಗಿರುವುದಿಲ್ಲ, ಸುಳ್ಳು ಸರ್ಟಿಫಿಕೇಟ್‌ಗಳನ್ನು ತಂದು ನಾನು ಗೋವಾ ಚಳುವಳಿಯಲ್ಲಿ ಭಾಗವಹಿಸಿದ್ದೇನೆ ಎಂದು ಹೇಳುತ್ತಿದ್ದರು. ನಾನು ಬಂದೀಖಾನೆ ಸಚಿವನಾಗಿದ್ದಾಗ ಕೆಲವು ಉಪ ಬಂದೀಖಾನೆಗಳ ಸೀಲ್‌ಗಳು ಮಾಡಿಕೊಂಡು ನಾನು ಗೋವಾ ಚಳುವಳಿಯಲ್ಲಿ ಭಾಗಿಯಾಗಿದ್ದೇನೆ ಎಂದು ಹೇಳಿದಾಗ ನಾವು ವೆರಿಫಿಕೇಷನ್ ಮಾಡಿದರೆ ಅಲ್ಲಿ ದಾಖಲಾತಿಗಳೇ ಇರಲಿಲ್ಲ. ಸನ್ಮಾನ್ಯ ಜೆ.ಹೆಚ್. ಪಟೇಲರು ಮುಖ್ಯ ಮಂತ್ರಿಗಳಾಗಿದ್ದಾಗ ಇವರ ಸಂಭಾವನೆಯನ್ನು ಜಾಸ್ತಿ ಮಾಡಿದರು. ಸಂಭಾವನೆ ಜಾಸ್ತಿ ಮಾಡಿದಾಗ ಯಾರು ಗೋವಾ ಚಳುವಳಿಯಲ್ಲಿ ಭಾಗವಹಿಸಿದ್ದರು ಅಂತಹವರು ಇವತ್ತಿಗೂ ಹೇಳುತ್ತಿಲ್ಲ, ಇವರು ನಮ್ಮ ದೇಶದ ರಕ್ಷಣೆ ಆದರೆ ಸಾಕು ಎಂದು ಹೇಳುತ್ತಿದ್ದಾರೆ. ಏನೂ ಮಾಡದೆ ಇರುವ ಬಹುತೇಕ ಜನ ಚಳುವಳಿಯಲ್ಲಿ ಭಾಗಿಯಾಗಿದ್ದೇವೆಂದು ಸುಳ್ಳು ಸರ್ಟಿಫಿಕೇಟ್ ತಂದು ತೋರಿಸಿದರು. ಸೆಂಟ್ರಲ್ ಜೈಲಿನಲ್ಲಿ ಈ ರೀತಿಯಾದಾಗ ಒಬ್ಬ

ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದೆವು. ಆದುದರಿಂದ ಗೋವಾ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಅವರ ವಯಸ್ಸು ಬಹಳ ಪ್ರಮುಖವಾದುದು ಕೆಲವರು ಉಪ ಬಂದೀಖಾನೆ ಸೀಲ್ ಮಾಡಿಕೊಂಡು ನಾವು ಈ ಬಂದೀಖಾನೆಯಲ್ಲಿದ್ದೆವು ಎಂದು ಸರ್ಟಿಫಿಕೇಟ್ ಪಡೆದುದು ಇತ್ತು. ಇವೆಲ್ಲಾ ನಾವು ಕೂಲಂಕುಷವಾಗಿ ಪರಿಶೀಲನೆ ಮಾಡಿದರೆ, ಈಗ ಪಡೆಯುತ್ತಿರತಕ್ಕಂತ ಹವರು ಕೂಡ ಬೋಗಸ್ ಆಗಿ ಹಣ ಪಡೆಯುತ್ತಿದ್ದಾರೆ. ಇಂತಹ ಕೆಲವು ನಿದರ್ಶನಗಳಿವೆ. ಆದುದರಿಂದ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದು, ಯಾರು ತುಂಬಾ ವಯಸ್ಸಾಗಿ ಚಳುವಳಿಗೋಸ್ಕರ ತಮ್ಮನ್ನೇ ತಾವು ಅರ್ಪಿಸಿಕೊಂಡಿರತಕ್ಕಂತಹ ಪ್ರಸಂಗಗಳು ಬಹಳ ಅಪರೂರ. ಈ ಅಪರೂಪದ ಪ್ರಕರಣಗಳು ಇದ್ದರೆ, ಅಂತಹ ಪ್ರಕರಣಗಳಲ್ಲಿ ಯಾವುದೇ ಬಂದೀಖಾನೆಯಲ್ಲಿ ಕೆಲವರಿಗೆ ಹಿಡಿದಾಗ ಕೆಲವರು ನಮಗೆ ಜೈಲಿಗೆ ಹೋಗುವುದಕ್ಕೆ ಇಷ್ಟವಿಲ್ಲ ನಮಗೆ ಬಿಟ್ಟು ಬಿಡಿ ನಾವು ಹೋಗುತ್ತೇವೆಂದು ಹೇಳುತ್ತಾರೆ. ಮತ್ತೆ ಕೆಲವರು ಜೈಲಿನಲ್ಲಿರುತ್ತಾರೆ. ಯಾರು ಅದಕ್ಕೋಸ್ಕರ ಹೋರಾಟ ಮಾಡಿದರು ಅಂತಹವರು ಬಹಳ ವಿರಳ. ವಿರಳವಾಗಿರತಕ್ಕಂತಹ ವ್ಯಕ್ತಿಗಳನ್ನು ಗುರುತು ಪಡಿಸತಕ್ಕಂತಹ ಕೆಲಸವನ್ನು ಮಾಡಬೇಕಾದರೆ, ಸ್ವತಂತ್ರ್ಯ ಹೋರಾಟಗಾರರ ಸಂಘ ಎಂದು ಇದೆ, ಈ ಸಂಘ ಎಲ್ಲಿಯೋ ಒಂದು ಕಡೆ ಇವತ್ತಿಗೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದೆ. ಅದರಲ್ಲಿ ಬಹುತೇಕರು ರಾಷ್ಟ್ರದ ಬಗ್ಗೆ ಮತ್ತು ನಾಡಿನ ಬಗ್ಗೆ ಚಿಂತನೆ ಮಾಡತಕ್ಕಂತಹವರು ಇದ್ದಾರೆ. ಅಂತಹವರ ಬಗ್ಗೆ ಚಿಂತನೆ ಮಾಡಿ ಅವರ ಸಮಕಾಲೀನರಾಗಿ ನಾವು ಇದ್ದು ಅವರಿಗೆ ಏನಾದರೂ ತೊಂದರೆಗಳಿದ್ದರೆ ಅಂತಹವರಿಗೆ ಸಹಕಾರ ನೀಡುವುದು ಸೂಕ್ತ. ಎಲ್ಲರಿಗೂ ಕೊಡಿ ಎಂದರೆ, 2000 ಅರ್ಜಿಗಳು ಹೋಗಿ 20,000 ಅರ್ಜಿಗಳಾಗುತ್ತವೆ. ಯಾವಾಗ ಸಂಭಾವನೆಯನ್ನು ಜಾಸ್ತಿ ಮಾಡಿದರು ಆಗ ಈ ಎಲ್ಲ ಪ್ರಕರಣಗಳು ಬೆಳಕಿಗೆ ಬಂದವು. ನಾನು ಸರ್ಕಾರದಲ್ಲಿ ವಿನಂತಿ ಮಾಡುವುದು, ರಾಷ್ಟ್ರಕ್ಕಾಗಿ ಹೋರಾಟ ಮಾಡಿದವರು ತುಂಬ ಕಷ್ಟದಲ್ಲಿದ್ದರೆ, ಅಂತಹವರನ್ನು ಗುರುತಿಸುವುದಕ್ಕಾಗಿ ಸ್ವತಂತ್ರ ಹೋರಾಟಗಾರರ ಸಂಘ ಏನಿದೆ ಅದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳಿದ್ದಾರೆ, ಅವರಿಗೆ ಅದನ್ನು ವಹಿಸಿ. ಈ ರಾಜ್ಯದಲ್ಲಿ ಗೋವಾ ರಾಜ್ಯದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು 100, 200 ಜನ ಸಿಗುವುದು ಕಷ್ಟ. ಆದರೆ ಇವತ್ತು ಸಂಭಾವನೆ ಕೊಡುತ್ತೇವೆಂದರೆ, 10,000 ಜನ ಅರ್ಜಿ ಹಾಕಿಕೊಳ್ಳುತ್ತಾರೆ. ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಮಾಡದೆ ಯಾರು ಕಷ್ಟದಲ್ಲಿದ್ದಾರೆ ಅವರಿಗೆ ಸರ್ಕಾರದಿಂದ ಹಸ್ತಲಾಘವ ನೀಡುವುದು ಸೂಕ್ತ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಹೋರಾಟಗಾರರ ಸಂಘ ಏನಿದೆ, ಅದರ ಮೂಲಕ ಇರಬಹುದು, ಅಥವಾ ಯಾವುದಾದರೂ ಒಂದು ಮಾಪಕದ ಮೂಲಕ ಅವರನ್ನು ಗುರುತಿಸುವಂತಹ ಪ್ರಕ್ರಿಯೆಗಾದರೂ ತಾವು ದಯವಿಟ್ಟು ಸ್ಪಂದಿಸಬೇಕು.

ಶ್ರೀ ವಿ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಸೋಮಣ್ಣನವರು ಹೇಳಿದ ಹಾಗೆ, ಅಕಸ್ಮಾತ್ತಾಗಿ ನಿಜವಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಿಗೆ ಪತ್ತೆ ಹಚ್ಚುವುದಕ್ಕಾಗಿ ಅವರಿಗೆ ಏನಾದರೂ ವಿಧಿ ವಿಧಾನಗಳನ್ನು ಅನುಸರಿಸುವುದಕ್ಕಾಗುತ್ತಾ? ಎಂದು ಹೇಳಿದ್ದಾರೆ, ಅದರ ಬಗ್ಗೆ ಪ್ರಯತ್ನ ಮಾಡೋಣ. ಸುಪ್ರೀಂ ಕೋರ್ಟಿನ ತೀರ್ಮಾನದ ಹಿನ್ನೆಲೆಯಲ್ಲಿ ಇದರ ಬಗ್ಗೆ ಸರ್ಕಾರದ ಕಡೆಯಿಂದ ಯಾವುದೇ ವಿಧವಾದ ಕಮಿಟ್‌ಮೆಂಟ್ ಮಾಡುವುದಕ್ಕೆ ಅವಕಾಶವಿರುವುದಿಲ್ಲ.

ಬೋಗಸ್ ಪ್ರಮಾಣಪತ್ರದ ವಿಷಯದಲ್ಲಿ ಎರಡೂ ಸದನಗಳಲ್ಲೂ ಚರ್ಚೆಯಾಗಿತ್ತು ಇವೆಲ್ಲಾ ಸುಳ್ಳು, ಬೋಗಸ್ ಪತ್ರಗಳು ಎಂದು ಸರ್ಕಾರದ ಗಮನಕ್ಕೆ ತಂದಿದ್ದರು ಅದನ್ನೆಲ್ಲಾ ವೆರಿಫೈ ಮಾಡಿ ನಾವು ಕ್ಯಾನ್ಸಲ್ ಮಾಡಿದಾಗ ಅದರ ಮೇಲೆ ಕೋರ್ಟಿಗೆ ಹೋದರು. ಆ ಕೋರ್ಟ್ ಆರ್ಡರ್‌ಮೇಲೆ ನಾವು ಅಪೀಲ್ ಹೋದಾಗ ಅವರು ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿಯೂ ಕೂಡ ಸರ್ಕಾರ ತೆಗೆದುಕೊಂಡ ತೀರ್ಮಾನವನ್ನು ಎತ್ತಿ ಹಿಡಿದಿದ್ದಾರೆ. ಆದ್ದರಿಂದ ಸುಪ್ರೀಂ ಕೋರ್ಟ್ ತೀರ್ಮಾನಕ್ಕೆ ನಾವು ತಲೆಬಾಗಬೇಕಾದ ಕಷ್ಟ ಸರ್ಕಾರಕ್ಕೆ ಇದೆ ಎಂದು ಸುಬ್ಬಾರೆಡ್ಡಿಯವರು ಒಪ್ಪುತ್ತಾರೆಂದು ಭಾವಿಸಿದ್ದೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಕೃಷ್ಣಪ್ಪನವರಿಗೂ ಸೋಮಣ್ಣನವರಿಗೂ ಗೊತ್ತಿಲ್ಲವೆಂದು ಕಾಣುತ್ತದೆ. ಸೋಮಣ್ಣನವರು ಬಹಳ ಯುವಕರು ಅವರಿಗೆ ಫ್ರೀಡಂ ಮೂವ್‌ಮೆಂಟ್ ಗೊತ್ತಿಲ್ಲ. ಕೃಷ್ಣಪ್ಪನವರಿಗೆ ಆ ಅನುಭವ ಇರಬಹುದು.

ಶ್ರೀ ವಿ. ಕೃಷ್ಣಪ್ಪ: ನಾನು ಮೊನ್ನೆ ಮುಖ್ಯ ಮಂತ್ರಿಗಳ ಮನೆಗೆ ಹೋದಾಗ ಇವರೆಲ್ಲಾ ಚಳುವಳಿ ಮಾಡಿಕೊಂಡು ಗೇಟ್ ಹತ್ತಿರ ಕೂತಿದ್ದರು. ನೀವು ಹೇಳಿದ ಹಾಗೆ ಮುಖ್ಯ ಮಂತ್ರಿಗಳು ಅವರಿಗೆ ಯಾವುದೇ ಕಮಿಟ್‌ಮೆಂಟ್ ಕೊಡಲಿಲ್ಲ. ಅವರು ಒಂದು ಪತ್ರ ಕೊಟ್ಟರು, ಆ ಪತ್ರ ತೆಗೆದುಕೊಂಡು ನಮ್ಮ ಜೊತೆಯಲ್ಲಿ ಬಂದರೇ ವಿನಃ ಅವರು ಯಾವುದೇ ಭರವಸೆಯನ್ನು ನೀಡಲಿಲ್ಲ. ಅವತ್ತು ಆಕಸ್ಮಾತ್ತಾಗಿ ನಾನೂ ಕೂಡ ಅಲ್ಲಿಯೇ ಇದ್ದೆ.

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ನಿಜವಾಗಿ ಗೋವಾ ಚಳುವಳಿಯಲ್ಲಿ ಭಾಗವಹಿಸಿದವರು ಇದ್ದಾರೆ. ಶ್ರೀ ಡಿ.ಹೆಚ್. ಹನುಮಂತಯ್ಯ ಇವರು ಹೋರಾಟದಲ್ಲಿ ನಿಜವಾಗಿ ಭಾಗವಹಿಸಿದವರು. ವಿ.ಆರ್. ನಾಯ್ಡುರವರು ಇದ್ದಾರೆ, ಇನ್ನು ಅನೇಕ ಜನ ಇದ್ದಾರೆ. ನಿಜವಾಗಿ ತೊಂದರೆ ಪಡುವವರು ಸ್ವಾತಂತ್ರ್ಯ ಹೋರಾಟಗಾರರು. ಅವರನ್ನು ನಾವು ನೋಡಬೇಕಾಗಿದೆ. ವಿ.ಆರ್. ನಾಯ್ಡುರವರ ಬಗ್ಗೆ ನಮಗೆಲ್ಲರಿಗೂ ಅಪಾರವಾದ ಗೌರವ ಇದೆ. ಇಡೀ ರಾಜ್ಯ ಅವರನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಿದೆ. ಇಷ್ಟು ದಿವಸ ನೀವು ಏನು ಮಾಡುತ್ತಿದ್ದೀರಿ, ಫೋರ್ಜರಿ ಮಾಡಿದ್ದರೆ ಅಂತಹವರನ್ನು ಹಿಡಿದು ಹಾಕಿ.

ಶ್ರೀ ವಿ. ಸೋಮಣ್ಣ: ಒಬ್ಬರು ಒಳ್ಳೆಯವರ ಹೆಸರಿನಲ್ಲಿ 16 ಜನ ಸೇರಿಕೊಂಡು ಅದರ ಲಾಭ ಪಡೆಯುವುದು ಬೇಡ.

ಶ್ರೀ ಎಸ್. ಸುರೇಶ್‌ಕುಮಾರ್: ಅಧ್ಯಕ್ಷರೆ, ಇನ್ನು ಎಷ್ಟು ಹೊತ್ತು ಸಭೆ ನಡೆಸಬೇಕೆಂದು ಯೋಚನೆ ಇದೆ,

ಅಧ್ಯಕ್ಷರು: ನೀವೆಲ್ಲಾ ಇಚ್ಛೆ ಪಟ್ಟರೆ ಅಡ್ಜರ್ನ್ ಮಾಡೋಣ, ಇಲ್ಲ ಇನ್ನು ನಡೆಸಬೇಕೆಂದರೆ ನಡೆಸೋಣ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಗೃಹ ಮಂತ್ರಿಗಳಿಗಾಗಿ ಕಾಯುತ್ತಿದ್ದೆ. ಅವರು ಈಗ ಇಲ್ಲಿದ್ದಾರೆ. ನನ್ನ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮೊದಲೇ ಅವಕಾಶ ಕೊಟ್ಟಿದ್ದಿರಿ.